# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, **ಗುರುವಾರ,** ೦೪ ಸೆಪ್ಟೆಂಬರ್, ೨೦೨೫ (**ಭಾದ್ರಪದ** ೧೩, ಶಕವರ್ಷ ೧೯೪೭)<br>BENGALURU, THURSDAY, 04 SEPTEMBER, 2025 (BHADRAPADA 13, SHAKAVARSHA 1947) | ನಂ. ೫೩೬<br>No. 536 |
|---|---|---|


**<u>ಕರ್ನಾಟಕ ಸರ್ಕಾರ</u>**

ಸಂಖ್ಯೆ: ಸಿಆಸುಇ 10 ಸೇನೆನಿ 2024

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿನಾಂಕ:04.08.2025

**<u>ಅಧಿಸೂಚನೆ</u>**

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ,1978ರ (1990ರ ಕರ್ನಾಟಕ ಅಧಿನಿಯಮ ಸಂಖ್ಯೆ:14)ರ 8ನೇ ಪ್ರಕರಣದೊಂದಿಗೆ ಓದಲಾದ, 3ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು,1977 ಕ್ಕೆ ತಿದ್ದುಪಡಿ ಮಾಡಲು ಈ ಕೆಳಕಂಡ ನಿಯಮಗಳ ಕರಡನ್ನು ಸದರಿ ಅಧಿನಿಯಮದ 3ನೇ ಪ್ರಕರಣದ (2ನೇ) ಉಪಪ್ರಕರಣದ (ಎ) ಖಂಡದ ಮೂಲಕ ಅಗತ್ಯಪಡಿಸಲಾದಂತೆ, ಇದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಲಾಗಿದೆ ಮತ್ತು ಸದರಿ ಕರಡನ್ನು ಅಧಿಕೃತ ರಾಜ್ಯಪತ್ರದಲ್ಲಿ ಅದು ಪ್ರಕಟವಾದ ದಿನಾಂಕದಿಂದ 15 ದಿನಗಳ ತರುವಾಯ ಪರಿಗಣನೆಗೆ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ಸೂಚಿಸಿದೆ.

ಮೇಲೆ ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾಗುವುದಕ್ಕೆ ಮೊದಲು ಸದರಿ ಕರಡು ನಿಯಮಗಳಿಗೆ ಸಂಬಂಧಿಸಿದಂತೆ, ಯಾರೇ ವ್ಯಕ್ತಿಯಿಂದ ರಾಜ್ಯ ಸರ್ಕಾರವು ಸ್ವೀಕರಿಸಬಹುದಾದ, ಯಾವುದೇ ಆಕ್ಷೇಪಣೆ ಅಥವಾ ಸಲಹೆಯನ್ನು ರಾಜ್ಯ ಸರ್ಕಾರ ಪರಿಗಣಿಸುತ್ತದೆ. ಆಕ್ಷೇಪಣೆಗಳು ಅಥವಾ ಸಲಹೆಗಳನ್ನು ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನಸೌಧ, ಬೆಂಗಳೂರು-560001 ಇವರಿಗೆ ಸಲ್ಲಿಸತಕ್ಕದ್ದು.

**<u>ಕರಡು ನಿಯಮಗಳು</u>**

**1. <u>ಶೀರ್ಷಿಕೆ ಮತ್ತು ಪ್ರಾರಂಭ:</u>**- (1) ಈ ನಿಯಮಗಳನ್ನು ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) (ತಿದ್ದುಪಡಿ) ನಿಯಮಗಳು, 2025 ಎಂದು ಕರೆಯತಕ್ಕದ್ದು.

(2) ಇದು ರಾಜ್ಯಪತ್ರದಲ್ಲಿ ಪ್ರಕಟಣೆಗೊಂಡ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. <u>ನಿಯಮ 9ಕ್ಕೆ ತಿದ್ದುಪಡಿ</u>:-** ಕರ್ನಾಟಕ ಸಿವಿಲ್ ಸೇವಾ(ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 9ರ ಉಪನಿಯಮ (1ಎಎ)ಯ ಕೆಳಗಿರುವ ವಿವರಣೆಯ ಖಂಡ(ii)ರಲ್ಲಿನ "ವಿಧವಾ ಮೊಮ್ಮಗಳು" ಪದಗಳ ನಂತರ "ವಿವಾಹಿತ ಮಗಳು" ಎಂಬ ಪದಗಳನ್ನು ಸೇರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ವೀರಭದ್ರು)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು-1).

## <u>GOVERNMENT OF KARNATAKA</u>

No: DPAR 10 SRR 2024

Karnataka Government Secretariat
Vidhana Soudha
Bangalore, Dated:04.08.2025

## <u>NOTIFICATION</u>

The draft of the following rules further to amend the Karnataka Civil Services (General Recruitment) Rules,1977, which the Government of Karnataka proposes to make in exercise of the powers conferred by Sub-Section (1) of section 3, read with section 8 of the Karnataka State Civil Services Act, 1978 (Karnataka Act 14 of 1990) is here by published as required by Clause (a) of sub-section (2) of Section 3 of the said Act, for the information of all person likely to be affected thereby and notice is hereby given that the said draft will be taken in to consideration after fifteen days from the date of its publication in the official Gazette.

Any objection or Suggestion which may be received by the State Government from any person with respect to the said draft before the expiry of the period specified above will be considered by the State Government. Objections and suggestions may be addressed to the Secretary to Government, Department of Personnel and Administrative Reforms, Vidhana Soudha, Bangalore-560001.

## DRAFT RULES

**1. Title and Commencement.-** (1)These Rules may be called the Karnataka Civil Services (General Recruitment) (Amendment) Rules, 2025.

(2) They shall come in to force from the date of their publication in the Official Gazette.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



**2.Ammendment of Rule 9.-** In the Karnataka Civil Services (General Recruitment) Rules,1977, in rule 9, in sub-rule (1AA), under the Explanation, in clause (ii), after the words "widowed grand daughter", the words "married daughter," shall be inserted.

By order and in the name of the
Governer of Karnataka.

(Veerabhadra)
Under Secretary to Government,
Department of Personnel and
Administrative Reforms,
(Service Rules-1).

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
THAMMAIAH